# ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಜೆ. ಎಂ ಎಫ ಸಿ ನ್ಯಾಯಾಲಯ ಹಿರೇಕೆರೂರು

ಸಿ.ಸಿ. ನಂಃ 26/2021

ಸಿ.ಡಬ್ಲ್ಯೂಃ 2 ಪಿ.ಡಬ್ಲ್ಯೂಃ 2

ಸಾಕ್ಷಿದಾರರ ಹೆಸರುಃ - ಸಿದ್ದಪ್ಪ ತಂದೆ ಬಸಪ್ಪ ಶಿದ್ಲಿಂಗಪ್ಪನವರ

ವಯಸ್ಸುಃ - 68 ವರ್ಷ

ಉದ್ಯೋಗ - ವ್ಯವಸಾಯ

ವಾಸಸ್ಥಳ - ಹಿರೇಮೊರಬ

ದಿನಾಂಕಃ 19-10-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ - ಪ್ರಭಾರ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-1 ಪರಿಚಯ ಇರುತ್ತಾನೆ. ಈ ಕೇಸಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಹಿರೇಮೊರಬದಲ್ಲಿರುವ ಚಾಸಾ-1 ರವರ ಮನೆಯಲ್ಲಿ 1 ವರ್ಷದ ಹಿಂದೆ ಕಳ್ಳತನವಾಗಿತ್ತು. ಏನೇನು ಕಳ್ಳತನವಾಗಿದ್ದವು ಎಂದು ಗೊತ್ತಿರುವುದಿಲ್ಲ. ಯಾರು ಪಿರ್ಯಾದಿಯನ್ನು ಕೊಟ್ಟಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿಲ್ಲ. ಸಾಕ್ಷಿ ಘಟನಾ ಜಾಗೆಯ ಪಂಚನಾಮೆಯಲ್ಲಿ ತಾನು ಸಹಿ ಮಾಡಿರುವುದಾಗಿ ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಚಾಸಾ-1 ರವರ ಮನೆಯಲ್ಲಿ ನಾನು ಹಾಗೂ ಚಾಸಾ-3 ರವರು ಕಳ್ಳತನವಾದ ನಂತರ ಪೋಲಿಸರು ಬಂದಾಗ ಸಹಿಯನ್ನು ಮಾಡಿರುತ್ತೇವೆ. ಸ್ಥಳವನ್ನು ಚಾಸಾ-1 ರವರು ತೋರಿಸಿರುತ್ತಾರೆ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಸಾಕ್ಷಿ 2 ಫೋಟೋಗಳಲ್ಲಿ ತಾನು ಇರುವುದಾಗಿ ನೋಡಿ ಗುರುತಿಸಿರುವುದರಿಂದ ಸದರಿ ಫೋಟೋಗಳನ್ನು ನಿಪಿ-3 ಹಾಗೂ 4 ಎಂದು ಹಾಗೂ ಅವುಗಳ ಸಿಡಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸದರಿ ಫೋಟೋಗಳನ್ನು ಪಂಚನಾಮೆಯ ಕಾಲದಲ್ಲಿ ತೆಗೆದಿರುತ್ತಾರೆ. ಪೋಲಿಸರು ನಮ್ಮನ್ನು ಎಲ್ಲಿಗೂ ಕರೆಸಿಕೊಂಡಿರುವುದಿಲ್ಲ ಹಾಗೂ ಯಾರನ್ನು ತೋರಿಸಿಲ್ಲ. ಪೋಲಿಸರಿಗೆ ಮರು ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸಹಾಯಕ ಸರ್ಕಾರಿ ಅಭಿಯೋಕರು ಪಾಟೀ ಸವಾಲಿಗೆ ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಕೋರಿಕೆಯನ್ನು ಮನ್ನಿಸಲಾಯಿತು.)

ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿಃ 15-03-2019 ರಂದು ... ...................... ವಿಷಯವನ್ನು ಕೇಳಿ ತಿಳಿದುಕೊಂಡೆವು ಎಂದು ಓದಿ ಹೇಳಲಾದ ಹೇಳಿಕೆಯ ಭಾಗವನ್ನು ಸಾಕ್ಷಿ ಸುಳ್ಳೆಂದು ಅಲ್ಲಗಳೆದ ಕಾರಣ, ಸದರಿ ಭಾಗವನ್ನು ನಿಪಿ-5 ಎಂದು ಗುರುತಿಸಲಾಯಿತು.

ಸಿ.ಸಿ. ನಂಃ 26/2021
ಸಿ.ಡಬ್ಲ್ಯೂಃ 2 ಪಿ.ಡಬ್ಲ್ಯೂಃ 2

ಪಂಚನಾಮೆ ಕಾಲದಲ್ಲಿ ಚಾಸಾ-1 ರವರು ನಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗಿರುತ್ತಾರೆ ಎನ್ನುವುದು ನಿಜ. ಪಂಚನಾಮೆಯ ಕಾಲದಲ್ಲಿ 1 ಕಬ್ಬಿಣದ ರಾಡು, 1 ಸ್ಟೀಲ್ ಕಿಲಿ, ಒಂದು ಕಬ್ಬಿಣದ ಕಂದ್ಲಿ ಹಾಗೂ 1 ಕುಡುಗೋಲನ್ನು ಜಪ್ತಿ ಮಾಡಿರುತ್ತಾರೆ ಎನ್ನುವುದು ನಿಜ. ಸದರಿ ಪಂಚನಾಮೆಯನ್ನು ದಿಃ 16-03-2019 ರಂದು 2-00 ರಿಂದ 3-00 ಗಂಟೆಯವರೆಗೆ ಮಾಡಿರುತ್ತಾರೆ ಎನ್ನುವುದು ಗೊತ್ತಿರುವುದಿಲ್ಲ. ಮುದ್ದೆ ಮಾಲುಗಳನ್ನು ಈಗ ಬಹಳ ದಿನ ಆಗಿದ್ದರಿಂದ ಗುರುತಿಸಲು ಆಗುವುದಿಲ್ಲ.

ಈ ದಿವಸ ತಾವು ನನಗೆ ......................... ಅಳವಡಿಸಿಕೊಂಡು ಓದಲು ವಿನಂತಿ ಎಂದು ಓದಿ ಹೇಳಲಾದ ಮರು ಹೇಳಿಕೆಯ ಭಾಗವನ್ನು ಸಾಕ್ಷಿ ಸುಳ್ಳೆಂದು ಅಲ್ಲಗಳೇದ ಕಾರಣ, ಸದರಿ ಭಾಗವನ್ನು ನಿಪಿ-6 ಎಂದು ಗುರುತಿಸಲಾಯಿತು. ಹೇಳಿಕೆ ಹಾಗು ಮರುಹೇಳಿಕೆಯನ್ನು ಕೊಟ್ಟಿದ್ದರು ಸಹ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> 1 ನೇ ಆರೋಪಿ ಪರ ಶ್ರೀ ಸಿ. ಎಚ್. ಪಿ. ವಕೀಲರಿಂದಃ

ನಾನು ಹಾಗೂ ಚಾಸಾ-1 ರವರು ಆತ್ಮೀಯವಾಗಿರುತ್ತೇವೆ ಎನ್ನುವುದು ನಿಜ. ಇಂದು ನ್ಯಾಯಾಲಯಕ್ಕೆ ಚಾಸಾ-1 ರವರು ಕರೆದುಕೊಂಡು ಬಂದಿರುತ್ತಾರೆ ಎನ್ನುವುದು ನಿಜ. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ಮಾಹಿತಿ ಇರುವುದಿಲ್ಲ. ಏನು ಜಪ್ತಿ ಮಾಡಿರುತ್ತಾರೇ ಎಂದು ಗೊತ್ತಿರುವುದಿಲ್ಲ. ಘಟನಾ ಸ್ಥಳದಲ್ಲಿ ಪೋಟೋ ತೆಗೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> 2 ನೇ ಆರೋಪಿ ಪರ ಶ್ರೀ ಎಂ. ಬಿ. ಪಿ. ವಕೀಲರಿಂದಃ

1 ನೇ ಆರೋಪಿ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು )

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 19-10-2022

Sd/-
ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,
ಹಿರೇಕೆರೂರು